ಚಾಮುಂಡೇಶ್ವರಿ ವಿದ್ಯುತ್ ಸರಬರಾಜು
ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ,
ಚಾವಿಸನಿನಿ, ಮೈಸೂರು-570017
Telephone No: 0821-2417101

CHAMUNDESHWARI ELECTRICITY
SUPPLY CORPORATION LIMITED
*(A Government of Karnataka Undertaking)*
Corporate Office,
CESC, Mysuru-570017
Web Site: www.cescmysore.karnataka.gov.in
E-mail ID: gmtech@cescmysore.org

Company Identity Number[CIN]:- U40109KA2004SGC035177

# ಪ್ರಸ್ತಾವನೆ

**ವಿಷಯ :** WGP ಪರಿವರ್ತಕಗಳ ವಿಶ್ಲೇಷಣೆ ಕುರಿತು.

**ಉಲ್ಲೇಖ :**ದಿನಾಂಕ :11.10.2021 ರಂದು ಮಾನ್ಯ ವ್ಯವಸ್ಥಾಪಕ ನಿರ್ದೇಶಕರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೆಗೆದುಕೊಳ್ಳಲಾದ ನಿರ್ಣಯ.

ದಿನಾಂಕ: 11.10.2021 ರಂದು ನಿಗಮ ಕಛೇರಿಯಲ್ಲಿ ನಡೆದ ಸಭೆಯಲ್ಲಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕ ರವರು ಇಂಧನ ಇಲಾಖೆರವರ 100ದಿನಗಳ ಯೋಜನೆಯಡಿ 24 ಗಂಟೆಯೊಳಗೆ ವಿಫಲವಾದ ಪರಿವರ್ತಕಗಳನ್ನು ಬದಲಾಯಿಸಲು ಹಾಗೂ ಹಾಲಿಯಿರುವ ಪರಿವರ್ತಕ ಕೇಂದ್ರಗಳ ಸಾಮರ್ಥ್ಯವಾರು ಪರಿವರ್ತಕಗಳ ಶೇ 1%ರಷ್ಟು ಉಗ್ರಾಣದಲ್ಲಿ ದಾಸ್ತಾನಿರಿಸಬೇಕಾಗಿರುತ್ತದೆ. ದುರಸ್ಥಿ ಕೇಂದ್ರಗಳಲ್ಲಿ WGP ಪರಿವರ್ತಕಗಳ ದಾಸ್ತಾನು ಹೆಚ್ಚಾಗಿದ್ದು, ದುರಸ್ಥಿ ಕಾರ್ಯದಲ್ಲಿ ವಿಳಂಬವಾಗುತ್ತಿರುವುದು ಗಮನಿಸಿ ಶೀಘ್ರವಾಗಿ ದುರಸ್ಥಿಗೊಳಿಸಿ ದಾಸ್ತಾನಿರಿಸುವಂತೆ ಸೂಚಿಸಿರುತ್ತಾರೆ. ಆದ್ದರಿಂದ ಕೆಳಕಂಡಂತೆ ಈ ಆದೇಶವನ್ನು ಹೊರಡಿಸಲಾಗಿದೆ.

ಪ ಸಂ: ಚಾವಿಸನಿನಿ/ಡಿಎಸ್.ಎಮ್/01/07/2021-22/ Cys-1015 ದಿನಾಂಕ:13.10.2021

16 OCT 2021

**ಆದೇಶ:**

1. ಸಮಿತಿಯ ಅಧಿಕಾರಿಗಳು ವಿಶ್ಲೇಷಣೆಯನ್ನು ಪ್ರತಿ ಸೋಮವಾರ ಹಾಗೂ ಗುರುವಾರದಂದು (ಒಂದು ವೇಳೆ ಸದರಿ ವಾರದಂದು ರಜೆಯಿದ್ದಲ್ಲಿ ಮರು ದಿನದಂದು) ದುರಸ್ಥಿ ಕೇಂದ್ರಗಳಲ್ಲಿರುವ WGP ಪರಿವರ್ತಕಗಳ ಪರಿಶೀಲನೆ ನಡೆಸಿ ಆ ದಿನವೇ ವಿಭಾಗ ಕಚೇರಿಯ ಮುಖ್ಯಸ್ಥರಿಗೆ ವರದಿಯನ್ನು ನೀಡುವುದು.
2. ಎಲ್ಲಾ ಪರಿವರ್ತಕ ಬ್ಯಾಂಕ್‌ಗಳಲ್ಲಿ ಹಾಲಿಯಿರುವ ಪರಿವರ್ತಕ ಕೇಂದ್ರಗಳ ಸಾಮರ್ಥ್ಯವಾರು ಪರಿವರ್ತಕಗಳ ಶೇ 1%ರಷ್ಟು ದಾಸ್ತಾನಿರಿಸುವುದು. ವಿಭಾಗದ ಉಗ್ರಾಣ ಹಾಗೂ ಪರಿವರ್ತಕ ಬ್ಯಾಂಕ್‌ಗಳಲ್ಲಿ ದಾಸ್ತಾನುವಿನ ಕೊರತೆಯಿದ್ದಲ್ಲಿ, ಪರಿವರ್ತಕಗಳು ಲಭ್ಯತೆವಿರುವ ಉಗ್ರಾಣದಿಂದ ವರ್ಗಾಯಿಸಲು ಮುಖ್ಯ ಇಂಜಿನಿಯರ್(ವಿ), ಕಾ& ಪಾ ಹಾಗೂ ಅಧೀಕ್ಷಕ ಇಂಜಿನಿಯರ್(ವಿ), ಕಾ&ಪಾ ರವರುಗಳು ಕ್ರಮವಹಿಸುವುದು.
3. ವಿಫಲಗೊಂಡ ಪರಿವರ್ತಕಗಳನ್ನು 24 ಗಂಟೆಯೊಳಗೆ (ರಜಾ ದಿನವೂ ಸೇರಿದಂತೆ) ಕಡ್ಡಾಯವಾಗಿ ಬದಲಾಯಿಸುವುದು.
4. ವಿಫಲಗೊಂಡ ಪರಿವರ್ತಕಗಳನ್ನು ವಿಫಲಗೊಂಡ ದಿನ ಅಥವ ಮರು ದಿನವೇ ಉಗ್ರಾಣದ ಲೆಕ್ಕಕ್ಕೆ ಪಡೆದು ಕನಿಷ್ಟ ಸಂಖ್ಯೆಯ ಪರಿವರ್ತಕಗಳ ಸಂಗ್ರಹವಾದ ನಂತರ ಶೀಘ್ರವಾಗಿ ದುರಸ್ಥಿ ಕೇಂದ್ರಕ್ಕೆ ಖರೀದಿ ಆದೇಶ ನೀಡಿ ಕಾರ್ಯಪ್ರೇಷಣೆಯಂತೆ 150 ಸಂಖ್ಯೆಯ ಪರಿವರ್ತಕಗಳನ್ನು ನಿಗಧಿತ ಅವಧಿಯೊಳಗೆ ರಿಪೇರಿಗೊಳಿಸಿ ದಾಸ್ತಾನಿರಿಸುವುದು.

13.10.2021.

ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)
ಚಾ.ವಿ.ಸ.ನಿ.ನಿ, ಮೈಸೂರು.

**ಪ್ರತಿಗಳು :**

1. ಮುಖ್ಯ ಇಂಜಿನಿಯರ್(ವಿ), ಕಾ & ಪಾ ವಲಯ , ಚಾವಿಸನಿನಿ, ಮೈಸೂರು/ಹಾಸನ.
2. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾ & ಪಾ ವೃತ್ತ , ಚಾವಿಸನಿನಿ.
3. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ & ಪಾ ವಿಭಾಗ , ಚಾವಿಸನಿನಿ.
4. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಮಾಪಕ ಪರೀಕ್ಷಾ ವಿಭಾಗ, ಚಾವಿಸನಿನಿ, ಮೈಸೂರು/ಹಾಸನ.
5. ಉಪ ಪ್ರಧಾನ ವ್ಯವಸ್ಥಾಪಕರು, ಟಿ.ಎ.ಕ್ಯೂ.ಸಿ 1 &2, ನಿಗಮ ಕಛೇರಿ, ಚಾವಿಸನಿನಿ, ಮೈಸೂರು.
6. ಎಲ್ಲಾ ಸಹಾಯಕ ಪ್ರಧಾನ ವ್ಯವಸ್ಥಾಪಕರು, ಟಿ.ಎ.ಕ್ಯೂ.ಸಿ 1 &2, ನಿಗಮ ಕಛೇರಿ, ಚಾವಿಸನಿನಿ, ಮೈಸೂರು.
7. ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)(ಕಛೇರಿ), ಕಾ & ಪಾ ವಿಭಾಗ , ಚಾವಿಸನಿನಿ.
8. ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ & ಪಾ ಉಪವಿಭಾಗ , ಚಾವಿಸನಿನಿ.
9. ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಎಲ್.ಟಿ/ಹೆಚ್.ಟಿ ರೇಟಿಂಗ್ ಉಪವಿಭಾಗ ಚಾವಿಸನಿನಿ.
10. ಆಪ್ತ ಸಹಾಯಕರು, ವ್ಯವಸ್ಥಾಪಕ ನಿರ್ದೇಶಕರು/ತಾಂತ್ರಿಕ ಸಹಾಯಕರು, ನಿರ್ದೇಶಕರು (ತಾಂತ್ರಿಕ)/ ಚಾವಿಸನಿನಿ, ರವರ ಗಮನಕ್ಕೆ.

ಮುಖ್ಯ ಕಡತ/ ಕಛೇರಿ ಪ್ರತಿ.

16 OCT 2021